ಕೈಗೊಳ್ಳುವಂಥ ವಿಚಾರ ಸರ್ಕಾರದ ಮಟ್ಟದಲ್ಲಿ ಇದೆಯೇ ಎನ್ನುವ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಆಗಲೀ ಉತ್ತರದಲ್ಲಿ ಹೇಳಿದ್ದೇನೆ. ಮೈಸೂರು ನಗರ ನ್ಯಾಯಾಲಯದ ಆವರಣದಲ್ಲಿ ಸುಮಾರು 15 ಕಟ್ಟಡಗಳು ಇವೆ. ಅವರಲ್ಲಿ ಕೆಲವು ಕಟ್ಟಡಗಳಿಗೆ 100 ವರ್ಷ ಆಗಿದೆ, ಇನ್ನು ಕೆಲವು ಕಟ್ಟಗಳಿಗೆ 30 ವರ್ಷಗಳಾಗಿವೆ, ಮತ್ತೆ ಇನ್ನು ಕೆಲವು ಕಟ್ಟಡಗಳಿಗೆ 40–42 ವರ್ಷಗಳಷ್ಟಾಗಿವೆ. ಇನ್ನು ನವೀಕರಣದ ಬಗ್ಗೆ, ಅಭಿವೃದ್ಧಿ ಬಗ್ಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ರೆಗ್ಯುಲರ್ ಮೆಯಿಂಟೆನೆನ್ಸ್ ಗೋಸ್ಕರವಾಗಿ ಸುವಾರು ರೂ. 27 ರಿಂದ 28 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ ಈ ಕಟ್ಟಡಗಳನ್ನು ಅಭಿವೃದ್ಧಿ, ನವೀಕರಿಸಬೇಕೆನ್ನುವ ಸಲಹೆ ಏನಿದೆ ಇದನ್ನು ನಾನು ನಮ್ಮ ಇಲಾಖೆಯಿಂದ ಪಿ.ಡಬ್ಲ್ಯೂಡಿ ಇಲಾಖೆಗೆ ಬರೆದು ಅಲ್ಲಿ ಅವರ ಮಾಹಿತಿಯನ್ನೆಲ್ಲಾ ಸಂಗ್ರಹಿಸಿ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಅಪೂರ್ಣವಾಗಿರತಕ್ಕಂಥ ಕೆಲಸವನ್ನು ಎಷ್ಟು ದಿನಗಳಲ್ಲಿ ಮುಗಿಸುತ್ತಾರೆ ಎನ್ನುವುದನ್ನು ಕೇಳಬಯಸುತ್ತೇನೆ. ಒಂದು ವರ್ಷದಲ್ಲಿ ಮುಗಿಸುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅಪೂರ್ಣ ಅಂದರೆ ಯಾವುದು ಇದೆ ಎನ್ನುವುದನ್ನು ಸ್ಪೆಸಿಫಿಕ್ ಆಗಿ ಹೇಳಿದರೆ ಒಳ್ಳೆಯದು. ಅಲ್ಲಿ 15 ಕಟ್ಟಡಗಳು ಇವೆ. ಅಪೂರ್ಣ ಎಂದರೆ ಯಾವುದು ಎನ್ನವುದನ್ನು ಸ್ಪೆಸಿಫಿಕ್ ಆಗಿ ಹೇಳಿದರೆ ಅದನ್ನು ನಾನು ನೋಡಿ ಹೇಳಬಹುದು. ಜನರಲ್ ಆಗಿ ಪ್ರಶ್ನೆಯನ್ನು ಕೇಳಿದರೆ ಹೇಗೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಎಲ್ಲವೂ ಚೌಚೌ ಬಾತ್ ತರಹ ಅರ್ಧಕ್ಕೆ ಮಾತ್ರ ಕೆಲಸ ಮಾಡಿ ನಿಲ್ಲಿಸಿದ್ದಾರೆ. ಆ ನ್ಯಾಯಾಲಯದಲ್ಲಿ ಕುಳಿತುಕೊಳ್ಳಲಿಕ್ಕೆ ಜಾಗವಿಲ್ಲ, ಅಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಏನು ಹೇಳಿದೆನೆಂದರೆ, ಇಲ್ಲಿ ರಾಜ್ಯಸರ್ಕಾರ, ಉಚ್ಚನ್ಯಾಯಾಲಯ, ಪಿ.ಡಬ್ಲ್ಯೂ.ಡಿ ಇಲಾಖೆ ಇವುಗಳ ಮಧ್ಯೆ ಸಂಬಂಧ ಮತ್ತು ಸಂಪರ್ಕ ಎರಡನ್ನೂ ಏರ್ಪಡಿಸಬೇಕು. ಮೈಸೂರಿನಲ್ಲಿರುವ ನ್ಯಾಯಾಲಯದ ಆವರಣದಲ್ಲಿರುವ ಕಟ್ಟಡಗಳು ಈಗಿನದು ಅಲ್ಲ. ಇದು ಮೈಸೂರು ಸಂಸ್ಥಾನದ ಕಾಲದಿಂದಲೂ ಆ ಕೋರ್ಟ್‌ಗಳು ನಡೆಯುತ್ತಾ ಇವೆ. ಆದ್ದರಿಂದ ಇದರ ರಿಪೇರಿಗೆ ಎಷ್ಟು ಖರ್ಚು ಮಾಡಬೇಕು, ಯಾವಾಗ ಮಾಡುತ್ತೀರಿ ಎಂದು ಈ ತಕ್ಷಣವೇ ಹೇಳಿ ಎಂದು ಕೇಳಿದರೆ ಉತ್ತರ ಹೇಳುವುದು ಕಷ್ಟ. ನಾನು ಮಾಹಿತಿ ತರಿಸಿ ನಿಮಗೆ ವಿವರವನ್ನು ಕೊಡುತ್ತೇನೆ.

ಸ್ತ್ರೀ ಶಕ್ತಿ ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಿಸುವುದು

402 (3654) : ಶ್ರೀ ಸಭಾಪತಿ ಯು.ಆರ್. (ಉಡುಪಿ), : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಯೋಜನೆಯನ್ನು ನಗರ ಪ್ರದೇಶಗಳಿಗೆ ವಿಸ್ತರಿಸುವ ಬಗ್ಗೆ ಸರ್ಕಾರದ ನಿಲುವೇನು;

ಅ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಈಗಾಗಲೇ ವಿವಿಧ ಸಮಾಜ ಸೇವಾ ಸರ್ಕಾರಿಯೇತರ ಸಂಸ್ಥೆಗಳಿಂದ ಸಂಘಟಿಸಲ್ಪಟ್ಟು ಮಹಿಳಾ ಸ್ವಸಹಾಯ ಗುಂಪುಗಳನ್ನು ಸ್ತ್ರೀಶಕ್ತಿ ಯೋಜನೆಯಡಿ ತರುವ ಯೋಚನೆ ಸರ್ಕಾರಕ್ಕಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಸರ್ಕಾರವು ಸ್ತ್ರೀ ಶಕ್ತಿ ಯೋಜನೆಯ ಸಮಾನವಾದ ಒಂದು ಯೋಜನೆಯನ್ನು 31 ಆಯ್ದ ನಗರ ಪ್ರದೇಶಗಳಲ್ಲಿ ಪ್ರಸ್ತುತ ಸಾಲಿನಲ್ಲಿ ಜಾರಿಗೆ ತರಲು ಉದ್ದೇಶೀಸಿದೆ.

ಆ) ಕೇಂದ್ರ ಪುರಸ್ಕೃತ ಸ್ವರ್ಣಜಯಂತಿ ಷಹರಿ ರೋಜ್ ಗಾರ್ ಯೋಜನೆಯಲ್ಲಿ ಸ್ತ್ರೀ ಶಕ್ತಿ ಯೋಜನೆಯ ಸಮಾನವಾದ ಯೋಜನೆಯನ್ನು (ಮಿತವ್ಯಯ ಸಾಲದ ಮಹಿಳೆಯರ ಗುಂಪು) ಈಗಾಗಲೇ ನಗರ ಪ್ರದೇಶಗಳಲ್ಲಿ ಜಾರಿಯಲ್ಲಿ ಇರುತ್ತದೆ. ನಗರಾಭಿವೃದ್ಧಿ ಇಲಾಖೆಯ ನಿರ್ಮಲ ನಗರ ಯೋಜನೆಯಡಿಯಲ್ಲಿ ಪ್ರಸ್ತುತ ವರ್ಷ 31 ಆಯ್ದ ನಗರ ಪ್ರದೇಶಗಳಲ್ಲಿ 4 ಸಾವಿರ ಸ್ತ್ರೀ ಶಕ್ತಿ ಗುಂಪುಗಳನ್ನು ಪ್ರಾಯೋಗಿಕವಾಗಿ ರಚಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಸ್ತ್ರೀ ಶಕ್ತಿ ಯೋಜನೆಯ ಸಮಾನವಾದ ಒಂದು ಯೋಜನೆಯನ್ನು 31 ಆಯ್ದ ನಗರಗಳಲ್ಲಿ ಜಾರಿಗೆ ತಂದಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ನನ್ನ ಕ್ಷೇತ್ರವಾದ ಉಡುಪಿ ನಗರವೂ ಸಹ ಸೇರಿಕೊಂಡಿದೆ. ಆದರೆ ಕಳೆದ ಎರಡು ವರ್ಷಗಳಿಂದ ಕೇವಲ 50 ಸ್ತ್ರೀಶಕ್ತಿ ಗುಂಪುಗಳನ್ನು ಈ ಸ್ವರ್ಣಜಯಂತಿ ಷಹರಿ ರೋಜ್‌ಗಾರ್ ಯೋಜನೆಯಲ್ಲಿ ಮಾಡಲಿಕ್ಕೆ ಆಗಿದೆ. ಆದರೆ ಸರ್ಕಾರಿಯೇತರ ಸಂಘಟನೆಗಳು ಈಗಾಗಲೇ ಸುಮಾರು 300 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳನ್ನು ನಮ್ಮ ನಗರಸಭೆಯೊಳಗೆ ಮಾಡಿದ್ದಾರೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಸಲಹೆ ಕೊಡಬಯಸುವುದೇನೆಂದರೆ, ನಗರ ಪ್ರದೇಶಗಳಲ್ಲಿರತಕ್ಕಂಥ ಸ್ತ್ರೀಶಕ್ತಿ ಯೋಜನೆಯನ್ನು ಮಹಿಳಾ ಶಿಶುಕಲ್ಯಾಣ ಇಲಾಖೆಗೆ ಏಕೆ ಮರ್ಜ್ ಮಾಡಬಾರದು? ಏಕೆಂದರೆ ಇಮ ಒಂದು ಚೌಕಟ್ಟಿನೊಳಗೆ ಬಂದಾಗ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಗರಸಭೆಯಲ್ಲಿ ಬಡತನ ರೇಖೆಗಿಂತ ಕಡಿಮೆ ಇರತಕ್ಕಂಥ ಸ್ತ್ರೀಯರು ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದಾಗಿ, ಇವತ್ತು ಏನು ನಗರ ಪ್ರದೇಶ ಅಲ್ಲದೇ ಇದ್ದಲ್ಲಿ ಏನು 70 ಸಾವಿರ ಗುಂಪುಗಳನ್ನು ಮಾಡಿದ್ದೇವೋ, ಅದೇ ರೀತಿ ನಗರ ಪ್ರದೇಶದಲ್ಲೂ ಅಷ್ಟೇ 70 ಸಾವಿರ ಗುಂಪುಗಳನ್ನು ಮಾಡುವುದಕ್ಕೆ ಅವಕಾಶ ಇದೆ. ಸೋ, ಇದನ್ನು ಮಾನಿಟರ್ ಮಾಡುವುದಾದರೆ, ಮಹಿಳಾ ಶಿಶು ಕಲ್ಯಾಣ ಇಲಾಖೆಗೆ ಬಹಳಷ್ಟು ಸಹಾಯ ಆಗುತ್ತದೆ. ಆದ್ದರಿಂದ ಇದನ್ನು ಮಹಿಳಾ ಇಲಾಖೆಗೆ ಏಕೆ ಹಸ್ತಾಂತರಿಸಬಾರದು ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಶ್ರೀ ಸ್ತ್ರೀಶಕ್ತಿ ಯೋಜನೆಗೆ ಒಂದು ಹೊಸ ರೂಪವನ್ನು ನಮ್ಮ ಸರ್ಕಾರ ಕೊಟ್ಟಿರುವುದು ನಮ್ಮ ಮಾನ್ಯ ಸದಸ್ಯರಿಗೂ ಗೊತ್ತಿದೆ ಮತ್ತು ರಾಜ್ಯದ ಜನತೆಗೂ ಗೊತ್ತಿನೆ. 70 ಸಾವಿರ ಗುಂಪಿಗೆ, ಪ್ರತಿ ಗುಂಪಿಗೆ ಸುಮಾರು 5 ಸಾವಿರ ರೂಪಾಯಿಗಳಂತೆ ವಂತಿಗೆ ಹಣವನ್ನು ಕೊಟ್ಟು, ಸೀಡ್ ಮನಿ ಕೊಟ್ಟು ನಾವು ಪ್ರಾರಂಭ ಮಾಡಿಸುತ್ತಿದ್ದೇವೆ. ಇದು ಕೇಂದ್ರ ಪುರಸ್ಕೃತ ಸ್ವರ್ಣಜಯಂತಿ ಷಹರಿ ರೋಜ್ ಗಾರ್ ಯೋಜನೆಯ ಅಡಿಯಲ್ಲಿ 15 ಸಾವಿರ ರೂ.ಗಳಷ್ಟು ಹಣವನ್ನು ಸರ್ಕಾರ ಕೊಟ್ಟು ಅದಕ್ಕೆ ಒಂದು ಕೋಟಿ ರೂಪಾಯಿಗಳ ಹಣವನ್ನು

ಇಟ್ಟಿದ್ದೇವೆ. ಸ್ತ್ರೀಶಕ್ತಿ ಗುಂಪಿಗೆ ಬರೀ ಐದು ಸಾವಿರ ರೂ.ಗಳನ್ನು ಕೊಟ್ಟಿದೆ. ಬೇಕಾದಷ್ಟು ಸೆಲ್ಫ್ ಹೆಲ್ಪ್ ಗ್ರೂಪ್ಸ್ ಇವೆ. ಇದು ಸಿಡಿಪಿ ಡಿಪಾರ್ಟ್‌ಮೆಂಟ್‌ನ ಮತ್ತು ನಮ್ಮ ಮಕ್ಕಳ ಕಲ್ಯಾಣ ಇಲಾಖೆಯ ಕನ್ಸ್‌ಪ್ಟ್‌ಗೂ ವ್ಯತ್ಯಾಸ ಆಗುತ್ತದೆ. ಅದಕ್ಕಾಗಿ ತಾವು ಏನು ಹೇಳಿದಿರಿ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ಹೊಸದಾಗಿ ನಗರ ಪ್ರದೇಶಗಳಿಗೂ ಇದನ್ನು ವಿಸ್ತರಣೆ ಮಾಡಿ, ನಗರದ ಮಹಿಳೆಯರಿಗೂ ಒತ್ತನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಹೊಸದಾಗಿ 31 ನಗರಗಳನ್ನು ಈಗಾಗಲೇ ನಿರ್ಮಲ ನಗರ ಯೋಜನೆಯಲ್ಲಿ ತೆಗೆದುಕೊಂಡಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. ಅದರಿಂದ, ಅಲ್ಲಿ ಬಡತನರೇಖೆಯಲ್ಲಿದ್ದಂಥ ಜನರನ್ನು ಗುರುತಿಸಲಿಕ್ಕೆ ತಮ್ಮೆಲ್ಲರ ವಿಶ್ವಾಸವನ್ನು ತೆಗೆದುಕೊಂಡು ಮಾಡಲಿಕ್ಕೆ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ, ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಲಿಕ್ಕೆ ತಾವು ಎಲ್ಲರೂ ಕೂಡ ಸಹಕಾರ ಮಾಡಬೇಕು, ಮತ್ತು ತಾವೇನು ಮಕ್ಕಳ ಕಲ್ಯಾಣ ಇಲಾಖೆಯ ವಿಚಾರನ್ನು ಹೇಳಿದಿರಿ ಅದನ್ನು ಪರಿಶೀಲಿಸಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ : ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಮಂಗಳೂರು ನಗರ ಪಾಲಿಕೆಯಂಥ ಪ್ರದೇಶಗಳಲ್ಲಿ ಈ ಸ್ವಸಹಾಯ ಗುಂಪುಗಳೆಂದು ಮಾಡಿದ್ದಾರೆ. ಈ ಎಡಿಬಿ.ಯಲ್ಲಿ ಬಡತನ ನಿರ್ಮೂಲನಾ ಯೋಜನೆಯಲ್ಲಿ ಸೇರ್ಪಡೆ ಮಾಡಿದ್ದಾರೆ. ಆದರೆ ಅವರು ಯಾರಿಗೂ ಷಹರಿ ರೋಜ್‌ಗಾರ್ ಯೋಜನೆಯ ಫಲ ಸಿಗುತ್ತಿಲ್ಲ. ಅವರಿಗೂ ಕೂಡ ಈ ಗ್ರೂಪ್‌ಗೆ ಅಳವಡಿಸಲಿಕ್ಕೆ ಸಾಧ್ಯವಾದರೆ 15 ಸಾವಿರ ರೂಪಾಯಿಗಳ ಸುತ್ತುನಿಧಿ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಅಳವಡಿಸುವುದಕ್ಕೆ ಯೋಜನೆಯನ್ನು ಕೈಗೊಳ್ಳುವಿರಾ?

ಶ್ರೀ ಡಿ.ಕೆ. ಶಿವಕುಮಾರ್ : ಈ ಷಹರಿ ರೋಜ್‌ಗಾರ್ ಯೋಜನೆಯಲ್ಲಿ ಏನು ಇನ್‌ಕಂ ಕ್ರೈಟೀರಿಯಾ ಮೇಳೆ ಇದೆ ಅಂಥವರು ಯಾರು ಬೇಕಾದರೂ ಅಪ್ರೋಚ್ ಮಾಡಬಹುದು, ಫೆಷಿಲಿಟೀಸ್ ಏನಿದೆ ಹಣ ಎಷ್ಟು ಸಿಗುತ್ತದೆ, ಸೀನಿಯಾರಿಟಿನಲ್ಲಿ ಯಾರು ಮುಂದೆ ಇರುತ್ತಾರೆ. ಅದಕ್ಕೆ ನಮ್ಮ ನಮ್ಮ ಕಾರ್ಪೊರೇಷನ್ ಇರಬಹುದು, ಸಿಎಂಸಿ ವ್ಯಾಪ್ತಿ ಇರಬಹುದು, ಅದಕ್ಕೆಲ್ಲಾ ಸರ್ಕಾರ ಮುಂದೆ ಬಂದು ಅದಕ್ಕೆ ಪ್ರತ್ಯೇಕವಾದ ಅಧಿಕಾರಿಗಳ ಒಂದು ತಂಡ ಇದೆ. ಮಧ್ಯೆ ಈ ನಿಮ್ಮ ಮಲ್ನಾಡ್ ಪ್ರದೇಶಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಈ ಕಡೆಯಲ್ಲಿ ಸೆಲ್ಫ್ ಹೆಲ್ಪ್ ಗ್ರೂಪ್ ಎಂದು ತನ್ನದೇ ಆದ ಕಲ್ಪನೆಯಲ್ಲಿ ಎನ್ ಜಿ ಓಸ್ ಕೆಲಸ ಮಾಡುತ್ತಿವೆ. ಹೀಗಾಗಿ ಇವು ಇರುವುದರಿಂದ ಸ್ವಲ್ಪ ತಾರತಮ್ಯ ತಮಗೆ ಕಾಣತ್ತಿರಬಹುದು. ಅವರು ನಮ್ಮ ಸರ್ಕಾರದ ಅಡಿಯಲ್ಲಿ ಆ ಗುಂಪಿಗೆ ಸೇರಿಕೊಳ್ಳುತ್ತೇವೆ, ಬರುತ್ತೇವೆಂದು ಅವರು ಬಂದರೆ, ಖಂಡಿತವಾಗಿ ನಾವು ಅವರಿಗೆ ಸಹಾಯ ಮಾಡುತ್ತೇವೆ.

ಶ್ರೀ ಯು.ಆರ್. ಸಭಾಪತಿ : ನಮ್ಮ ಕರ್ನಾಟಕ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆ, ಅಂದರೆ ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ. ಇದರಲ್ಲಿ ನಮ್ಮ ನಗರಕ್ಕೂ 129 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ, ನಮ್ಮ ಮಂಗಳೂರು ಮಹಾ ನಗರ ಪಾಲಿಕೆಗೂ 300 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಈ ಯೋಜನೆಯಡಿಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಗುಂಪನ್ನು ರಚನೆ ಮಾಡಲಿಕ್ಕೆ ಸರಕಾರಿಯೇತರ ಸಂಸ್ಥೆಯಾದ ಶ್ರೀ ಕ್ಷೇತ್ರ ಧರ್ಮಸ್ಥಳ ನಗರ ಸಮುದಾಯ ಯೋಜನೆಯವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇವತ್ತು ಶ್ರೀ ಕ್ಷೇತ್ರ ಧರ್ಮಸ್ಥಳ

ನಗರ ಸಮುದಾಯ ಯೋಜನೆಯಡಿಯಲ್ಲಿ 250 ಗ್ರೂಪ್‌ಗಳು ಬಂದಿವೆ, ಈ 250 ಗ್ರೂಪ್‌ಗಳು ನಮ್ಮ ಯೋಜನೆಯಡಿಯಲ್ಲಿ ಬಂದಿರುವುದರಿಂದ ಅವರಿಗೂ 15 ಸಾವಿರ ಸುತ್ತುನಿಧಿಯನ್ನು ಕೊಡತಕ್ಕಂಥ ಕೆಲಸ ಮಾಡಬಹುದೆ?

ಶ್ರೀ ಡಿ.ಕೆ. ಶಿವಕುಮಾರ್ : ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಎ.ಎಸ್. ಗುರುಸ್ವಾಮಿ, ಅವರು ಇಲ್ಲ. ಮುಂದಿನ ಪ್ರಶ್ನೆ ಮಾನ್ಯ ಶಂಕರ್ ಲಿಂಗೇಗೌಡರವರು. ತಾವು ಕೇಳೀ..

ಸ್ವಯಂ ನಿವೃತ್ತಿ ಬಯಸಿ ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡುವ ಬಗ್ಗೆ

442 (3873) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ವಿವಿಧ ಇಲಾಖೆಗಳಲ್ಲಿ ಸ್ವಯಂ ನಿವೃತ್ತಿ ಬಯಸಿ ಅರ್ಜಿ ಸಲ್ಲಿಸಿದ್ದವರ ಪೈಕಿ ಬಾಕಿ ಇರುವ ಅರ್ಜಿಗಳೆಷ್ಟು?

ಆ) ಈ ಅರ್ಜಿಗಳು ಎಷ್ಟೆಷ್ಟು ಅವಧಿಯಿಂದ ಯಾವ ಕಾರಣಕ್ಕಾಗಿ ಬಾಕಿ ಇವೆ;

ಇ) ಈ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಿ ಸಂಬಂಧಿಸಿದವರ ಕೋರಿಕೆಯನ್ನು ಈಡೇರಿಸುವ ವಿಚಾರದಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) 197 (ಕಾನೂನು ಮತ್ತು ಕಂದಾಯ ಇಲಾಖೆಗಳನ್ನು ಹೊರತುಪಡಿಸಿ)

ಆ) ಒಂದು ತಿಂಗಳಿನಿಂದ ಮೂರು ವರ್ಷಗಳವರೆಗೆ ಬಾಕಿ ಇವೆ. ಇಲಾಖಾ ವಿಚಾರಣೆ ಬಾಕಿಯಿರುವುದರಿಂದ ಬೇಬಾಕಿ ಪತ್ರ ಬರೆಬೇಕಾಗಿರುವುದರಿಂದ, ಮಹಾಲೇಖಪಾಲಕರಿಂದ ಅರ್ಹತಾ ಸೇವಾ ದೃಢೀಕರಣಪತ್ರ ಬಾಕಿಯಿರುವುದರಿಂದ, ಮುಂತಾದ ಕಾರಣಗಳಿಂದ ಬಾಕಿ ಇದೆ.

ಇ) ಸ್ವಯಂ ನಿವೃತ್ತಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹ ಪ್ರಕರಣಗಳನ್ನು ಆದಷ್ಟು ತ್ವರಿತವಾಗಿ ಇತ್ಯರ್ಥಪಡಿಸಲಾಗುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಿರಾಶೆಯಾಗಿರತಕ್ಕಂಥವರು ನಿವೃತ್ತಿ ಬಯಸುತ್ತಾರೆ. ಕಾನೂನು ಮತ್ತು ಕಂದಾಯ ಇಲಾಖೆಗಳನ್ನು ಹೊರತುಪಡಿಸಿ 197 ಎಂದು ಕೊಟ್ಟಿದ್ದಾರೆ. ಉಳಿದವುಗಳನ್ನು ಏಕೆ ನಿಖರವಾಗಿ ಕೊಟ್ಟಿಲ್ಲ? ನಿವೃತ್ತಿ ಬಬಯಸುವುದು ಏಕೆ? ಮಕ್ಕಳನ್ನು ಮದುವೆ ಮಾಡುವುದಕ್ಕೆ, ಅಥವಾ ಮಕ್ಕಳನ್ನು ಓದಿಸುವುದಕ್ಕೆ ಸಾಲ-ಸೋಲ ಮಾಡಿ ಕಷ್ಟದಿಂದ ಮಕ್ಕಳನ್ನು ಓದಿಸುವುದಕ್ಕಾಗಿ ನಿವೃತ್ತಿ ತೆಗೆದುಕೊಳ್ಳುತ್ತಿದ್ದಾರೆ. ಅವರ ಅರ್ಜಿಗಳನ್ನು ಜಾಗ್ರತೆಯಾಗಿ ವಿಲೇವಾರಿ ಮಾಡಲಿಲ್ಲ; ಮತ್ತು ನಿಖರವಾದ ಉತ್ತರವನ್ನು ಕೊಡಲಿಲ್ಲ. ಇದು ಹಾರಿಕೆ ಉತ್ತರದ ರೀತಿ ಇದೆ. ಆ ದಿನ ನಾನು ಗಲಾಟೆ ಮಾಡಿದಾಗ, ಈ ಪ್ರಶ್ನೆಗೆ ಉತ್ತರ ಬರುವುದಕ್ಕೆ 15 ದಿವಸವಾಯಿತು, 15 ದಿವಸಕ್ಕೆ ಇವರಲ್ಲಿ ಇರುವುದು ನಿಜವಾದಂಥ ಉತ್ತರವೇ ಇಲ್ಲ. ಕಂದಾಯ ಹಾಗೂ ಕಾನೂನು ಇಲಾಖೆಗಳನ್ನು ಹೊರತುಪಡಿಸಿ ಎಂದು ಹೇಳಿದ್ದಾರೆ. ಅವರು ಎಷ್ಟು ಜನ ಇದ್ದಾರೆ? ಆ ಅಂಕಿಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿಲ್ಲ. ಅದಕ್ಕಾಗಿ ಅವರು ಇದಕ್ಕೆ ನಿಗಾವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.